[Govt. of Karnataka C.R.P. 67]

| Deposition Sheets (RP.No.57) Form No.4 (Civil) | IN THE COURT OF CIVIL JUDGE & J.M.F.C., KARKALA. |
|---|---|

Criminal Case No. 340-2023

.................................................Vs...................................

ಸಾಕ್ಷಿದಾರನ ಹೆಸರು ಃ ವಾಸಪ್ಪ ನಾಯಕ್ ಪಿ.ಡಬ್ಲ್ಯೂಃ 7

ತಂದೆಯ ಹೆಸರುಃ ಅಣ್ಣು ನಾಯಕ್ ಸಿ.ಡಬ್ಲ್ಯೂಃ 10

ಪ್ರಾಯ ಃ 62 ವರ್ಷ

ಉದ್ಯೋಗ ಃ ನಿವೃತ್ತ ಪಿ ಎಸ್ ಐ,

ವಾಸ ಃ ಮಣಿಪಾಲ್, ಉಡುಪಿ

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ದಿಃ 03-07-2024

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ನಾನು ದಿಃ 07-08-2020 ರಿಂದ ದಿಃ 31-03-2021 ರವರೆಗೆ ಉಡುಪಿ ನಗರ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 26-11-2022 ರಲ್ಲಿ ಉಡುಪಿ ನಗರ ಪೋಲಿಸ್ ಠಾಣೆಯಲ್ಲಿ ಆರೋಪಿಯ ವಿರುದ್ದ ಠಾಣಾ ಅಕ್ರ 170/22 ರಂತೆ ಪ್ರ ವ ವರದಿ ದಾಖಲಾಗಿರುತ್ತದೆ. ನಮ್ಮ ಠಾಣಾ ಸಿಬ್ಬಂದಿ ದಿಃ 27-11-2022 ರಲ್ಲಿ ಆರೋಪಿಯನ್ನು ದಸ್ತಗಿರಿ ಮಾಡಿ ಉಡುಪಿ ನ್ಯಾಯಾಲಯದ ಮುಂದೆ ಹಾಜುರುಪಡಿಸಿರುತ್ತಾರೆ. ಸದರಿ ಅ ಕ್ರ ನಂಬರ್ ಅಡಿಯಲ್ಲಿ ನಾನು ಆರೋಪಿಯ ಕಬೂಲಾತಿ ಹೇಳಿಕೆಯನ್ನು ಪಡೆದುಕೊಂಡು, ಪ್ರಕರಣದಲ್ಲಿ ಆರೋಪಿ ಕಳುವು ಮಾಡಿದ ದ್ವಿಚಕ್ರ ವಾಹನ ಕೆಎ-20-ಈಕೆ-3084 ನಂಬರ್ ನ ವಾಹನವನ್ನು, 19,800 ರೂ ನಗದು, 1 ರೆಡಮಿ ಮೊಬೈಲ್ ಪೋನ್ ಹಾಗೂ ಒಂದು ಸ್ಪಾನರ್, ನೀಲಿ ಬಣ್ಣದ ರೈನ್ ಕೊಟಿನ ಪ್ಯಾಂಟ್ ಮತ್ತು ಅಂಗಿ, ಒಂದು ಕಪ್ಪು ಬಣ್ಣದ ಹೆಲ್ಮೆಟ್, ಹಸಿರು ಬಣ್ಣದ ಸಣ್ಣ ಪ್ಲಾಸ್ಟಿಕ್ ಟಾರ್ಚ್‌ಳನ್ನು ಸ್ವತ್ತು ಸ್ವಾಧೀನತಾ ಮಹಜರು ಮುಖೇನ ಸ್ವಾಧೀನಪಡಿಸಿಕೊಂಡಿರುತ್ತೇನೆ ಹಾಗೂ ಸ್ವತ್ತು ಪಟ್ಟಿ ಸಂಖ್ಯೆ 188/22 ರಡಿಯಲ್ಲಿ ಉಡುಪಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ನ್ಯಾಯಾಲಯದ ಆದೇಶದ ಮೇರೆಗೆ ಪ್ರಕರಣಕ್ಕೆ ಸಂಬಂಧಿಸಿದ ಅಕ್ರ ನಂಬರ್ 170/22 ಪ್ರ

ವ ವರದಿ, ಪಿರ್ಯಾದಿ, ಆರೋಪಿಯ ಕಬೂಲಾತಿ ಹೇಳಿಕೆ, ದಿಃ 27-11-2022 ರ ಆರೋಪಿ ದಸ್ತಗಿರಿ ಮತ್ತು ಸ್ವತ್ತು ಸ್ವಾಧೀನತಾ ಮಹಜರ್ ಗಳ ಯಥಾ ಪ್ರತಿಗಳನ್ನು ಕಾರ್ಕಳ ನಗರ ಠಾಣೆಗೆ ಕಳುಹಿಸಿಕೊಟ್ಟಿರುತ್ತೇನೆ.

ಸಾಕ್ಷಿಯು ತಾವು ಸ್ವಾಧೀನಪಡಿಸಿಕೊಂಡ ದ್ವಿಚಕ್ರ ವಾಹನದ ಭಾವಚಿತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಮತ್ತು 8 ಎಂದು ಗುರುತಿಸಲಾಯಿತು.

ಸಾಕ್ಷಿಯು ತಾವು ಸ್ವಾಧೀನಪಡಿಸಿಕೊಂಡ ಸ್ಪಾನರ್ ಮತ್ತು ಟಾರ್ಚ್ ಭಾವಚಿತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ-9 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಎಮ್ ಐ ಕೆ ವಕೀಲರಿಂದಃ

ನಾನು ಆರೋಪಿಯನ್ನು ದಸ್ತಗಿರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಸ್ತಗಿರಿ ಮಹಜರು ಹಾಗೂ ಸ್ವತ್ತು ಸ್ವಾ ಧೀನತಾ ಮಹಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಕಬೂಲಾತಿ ಹೇಳಿಕೆಯನ್ನು ನೀಡಿರುವುದಿಲ್ಲ ಹಾಗೂ ಯಾವುದೇ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ದಾಖಲೆಗಳನ್ನು ಕಾರ್ಕಳ ನಗರ ಠಾಣೆಗೆ ಹಸ್ತಾಂತರಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಪೂರಕವಾಗಿ ದಾಖಲೆಗಳನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೂ ನಾನು ಹಾಜರುಪಡಿಸಿದ ದಾಖಲೆಗಳಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ